# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಬಿ.ಕೆ. ಉತ್ತಮ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪುರವರ ಗ್ರಾಮ ಪಂಚಾಯಿತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ನಡೆಸಲಾದ ಇಲಾಖಾ ವಿಚಾರಣೆ-ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/435/ಗ್ರಾಪಂಕಾ/2016 ದಿನಾಂಕ:12.09.2016.
2. ಅಪರ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿ ಸಂಖ್ಯೆ:UPLOK-2/DE/487/2016/ARE-8, Date:13.02.2019.
3. ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಶಿಫಾರಸ್ಸು ಸಂಖ್ಯೆ: UPLOK-2/DE/487/2016/ARE-8, Date:15.02.2019.
4. ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಗ್ರಾಅಪ:435:ಗ್ರಾಪಂಕಾ:2016 ದಿನಾಂಕ:03.04.2019.
5. ಆಪಾದಿತ ನೌಕರರು ಎರಡನೇ ಕಾರಣ ಕೇಳುವ ನೋಟೀಸ್‌ಗೆ ಸಲ್ಲಿಸಿರುವ ಸಮಜಾಯಿಷಿ ದಿನಾಂಕ: 20.05.2019.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿನ ಸರ್ಕಾರದ ಆದೇಶದಲ್ಲಿ ಶ್ರೀ ಬಿ.ಕೆ. ಉತ್ತಮ್, ಹಿಂದಿನ ಪಿ.ಡಿ.ಓ, ಪುರವರ ಗ್ರಾಮ ಪಂಚಾಯಿತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಕರ್ತವ್ಯಲೋಪದ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14-ಎ ಅಡಿಯಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು. ಅದರಂತೆ ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ ಇವರು ಶ್ರೀ ಬಿ.ಕೆ. ಉತ್ತಮ್, ರವರ ವಿರುದ್ಧ ಈ ಕೆಳಕಂಡ ಆರೋಪದ ಮೇಲೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಿರುತ್ತಾರೆ.

**ದೋಷಾರೋಪಣೆ"**

ಆಪಾದಿತ ಸರ್ಕಾರಿ ನೌಕರರಾದ ಆದ ನೀವು ಪುರವರ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುವಾಗ 2007-08ನೇ ಸಾಲಿನಲ್ಲಿ ನರಸಿಂಹಪ್ಪ ತಂದೆ ಚಿನ್ನಾಸಪ್ಪ ನವರ ಹೆಸರಿನಲ್ಲಿರುವ ಖಾತೆ ಸಂ.78ನ್ನು ನಂತರ 78/1 ಎಂದು ಅಕ್ರಮವಾಗಿ ಖಾತೆ ತಯರಿಸಿ ಶ್ರೀಮತಿ ಮಂಜಮ್ಮ ಹಾಗೂ ಚಂದ್ರಮ್ಮ ಅವರಿಗೆ ಅಕ್ರಮವಾಗಿ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಿವೇಶನದ ಖಾತೆ ಸೃಷ್ಟಿಸಿ ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ರ ನಿಯಮ 3(1) (i) ಮತ್ತು (ii) ರಡಿಯಲ್ಲಿ ದುರ್ನಡತೆಯನ್ನೆಸಗಿದ್ದಿರಿ.

/

ವಿಚಾರಣಾಧಿಕಾರಿಯವರು ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿರುವುದಾಗಿ ನಿರ್ಣಯಿಸಿರುತ್ತಾರೆ. ಮಾನ್ಯ ಉಪಲೋಕಾಯುಕ್ತರು ವಿಚಾರಣಾ ವರದಿಯನ್ನು ಅಂಗೀಕರಿಸಿ ಸಾಬೀತಾದ ಅರೋಪಕ್ಕೆ ಅನುಗುಣವಾಗಿ ಶ್ರೀ. ಬಿ.ಕೆ. ಉತ್ತಮ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ಮತ್ತು 8(iii-ಎ) ರಡಿ ನಿರ್ದಿಷ್ಟಪಡಿಸಿದಂತೆ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಹಾಗೂ ಅವರನ್ನು ಮುಂಬಡ್ತಿಗೆ ಪರಿಗಣಿಸಿದ ದಿನಾಂಕದಿಂದ ಅವರ ಮುಂಬಡ್ತಿಯನ್ನು ನಾಲ್ಕು ವರ್ಷಗಳ ವರೆಗೆ ಮುಂದೂಡುವ"** ದಂಡನೆ ವಿಧಿಸಲು ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ವರದಿಯಲ್ಲಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮೇಲೆ ಓದಲಾದ ಕ್ರಮ ಸಂಖ್ಯೆ (4) ರಲ್ಲಿ ಶ್ರೀ. ಬಿ.ಕೆ. ಉತ್ತಮ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಇವರಿಗೆ ನಿಯಮಾನುಸಾರ ವಿಚಾರಣಾಧಿಕಾರಿಯವರ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನ ಪ್ರತಿಯೊಂದಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಿದ್ದು ಇದಕ್ಕೆ ಸಂಬಂಧಿಸಿದಂತೆ ಶ್ರೀ. ಬಿ.ಕೆ. ಉತ್ತಮ್, ರವರು ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಎರಡನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಸಮಜಾಯಿಷಿಯ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.

- ನಾನು ಪುರವರ ಗ್ರಾಮ ಪಂಚಾಯಿತಿಯಲ್ಲಿ ನೂತನವಾಗಿ ಸೃಷ್ಟಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ದಿನಾಂಕ: 06.06.2010 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತೇನೆ. ಸದರಿ ಪ್ರಕರಣದಲ್ಲಿ ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು 2007-08 ರಲ್ಲಿ ನರಸಿಂಹಪ್ಪ ಬಿನ್ ಚೆನ್ನಾಸಪ್ಪ ರವರ ಹೆಸರಿನ ಖಾತೆ ಸಂಖ್ಯೆ 78ನ್ನು ನಂತರ 78/1 ಎಂದು ವಾರಸ್ಸುದಾರರಿಂದ ಕರಾರು ಪತ್ರವನ್ನು ಪಡೆದುಕೊಂಡು ಉಪಖಾತೆಯನ್ನು ಶ್ರೀಮತಿ ಮಂಜಮ್ಮ ಹಾಗೂ ಚಂದ್ರಮ್ಮ ನವರಿಗೆ ವಸತಿ ಯೋಜನೆಯಲ್ಲಿ ಮನೆ ಮಂಜೂರಾಗಿರುವ ಪ್ರಯುಕ್ತ ಬೇಡಿಕೆ ವಹಿಯಲ್ಲಿ ನಮೂದಿಸಿ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಅಡಮಾನ ಪತ್ರವನ್ನು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಾಯಿಸಿರುತ್ತಾರೆ. ಇದರಂತೆ ಮುಂದುವರೆದು ನಾನು ಕರ್ತವ್ಯಕ್ಕೆ ಹಾಜರಾದ ನಂತರ ನಿಯಮಾನುಸಾರ ಹೊಸದಾಗಿ ನಿರ್ಮಾಣ ಮಾಡಿದ ಮನೆಗಳಿಗೆ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಶಿಫಾರಸ್ಸು ಮಾಡಿರುತ್ತೇನೆ.
- ವಿಚಾರಣಾಧಿಕಾರಿಗಳು ತಮ್ಮ ವಿಚಾರಣಾ ವರದಿಯಲ್ಲಿ ನಾನು ಸಲ್ಲಿಸಿರುವ ದಾಖಲೆಗಳನ್ನು ನಮೂದಿಸಿರುತ್ತಾರೆ. ಸದರಿ ಪ್ರಕರಣವು 2007-08 ಕ್ಕೆ ಸಂಬಂಧಿಸಿದ್ದು ಎಂದು ವರದಿಯಲ್ಲಿ ನಮೂದಿಸಿದ್ದು, ಆ ಅವಧಿಯಲ್ಲಿ ನಾನು ಪಿ.ಡಿ.ಓ. ಆಗಿ ಕೆಲಸ ನಿರ್ವಹಿಸದೆ ಇದ್ದರೂ ಸಹ ಆರೋಪ ಸಾಬೀತಾಗಿರುತ್ತದೆಂದು ವರದಿಯಲ್ಲಿ ನಮೂದಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ.
- ಶ್ರೀಮತಿ ಚಂದ್ರಮ್ಮ ನವರ ಹೆಸರಿನಲ್ಲಿ ಖಾತೆ ಸಂಖ್ಯೆ 115 ಬೇಡಿಕೆ ವಹಿಯಲ್ಲಿ ನೋಂದಣಿ ಅಲ್ಲದ ದಾನ ಪತ್ರದಂತೆ ಮತ್ತು ವಸತಿ ಯೋಜನೆ ಫಲಾನುಭವಿಯಾಗಿ ಆಯ್ಕೆಯಾಗಿರುವುದರಿಂದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸುತ್ತೋಲೆಯ

ದಿನಾಂಕ: 09.12.2016 ರ ನಿರ್ದೇಶನದಂತೆ ಬೇಡಿಕೆ ವಹಿಯಲ್ಲಿ ಸ್ವತ್ತಿನ ಮಾಲೀಕರಿಂದ ಅನುಮತಿ ಪಡೆದು ನೋಂದಣಿ ಅಥವಾ ನೋಂದಣಿ ಇಲ್ಲದಿದ್ದರು ಗ್ರಾಮಾ ಠಾಣೆ ಅಥವಾ ಹಿಡುವಳಿ ಭೂ ಸ್ವತ್ತಿನಲ್ಲಿ ನೇರವಾಗಿ ವಾರಸ್ಸುದಾರರಿಂದ ಅನುಮತಿ ಪಡೆದು ಫಲಾನುಭವಿಯ ಹೆಸರಿಗೆ ಬೇಡಿಕೆ ವಹಿಯಲ್ಲಿ ದಾಖಲಿಸಿ ಇದರಂತೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಹೆಸರಿನಲ್ಲಿ ಉಪನೊಂದಣಿಧಿಕಾರಿಗಳ ಕಛೇರಿಯಲ್ಲಿ ವಸತಿ ಯೋಜನೆ ಫಲಾನುಭವಿಯಿಂದ ಕರಾರು ಪತ್ರವನ್ನು ನೊಂದಾಯಿಸಲು ಹೊರಡಿಸಿರುವ ಆದೇಶದಂತೆ ನಾನು ನಿಯಮಾನುಸಾರ ಕ್ರಮ ವಹಿಸಿರುತ್ತೇನೆ. ನನ್ನ ಈ ಪ್ರಕರಣದಲ್ಲಿ ಯಾವುದೇ ಕರ್ತವ್ಯ ಲೋಪವೆಸಗಿರುವುದಿಲ್ಲ. ವಸತಿ ಯೋಜನೆಯ ಫಲಾನುಭವಿಯ ಅನುಕೂಲಕ್ಕಾಗಿ ಯಾವುದೇ ಖಾತೆಯನ್ನು ನಿಯಮ ಬಾಹಿರವಾಗಿ ನಾನು ತೆರೆದಿರುವುದಿಲ್ಲ. ಆದ ಕಾರಣ ವಿಚಾರಣಾಧಿಕಾರಿಗಳ ವರದಿಯನ್ನು ತಿರಸ್ಕರಿಸಲು ತಮ್ಮಲ್ಲಿ ಮನವಿ ಮಾಡಿರುತ್ತೇನೆ.

- ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರಿ ಸುತ್ತೋಲೆ ದಿನಾಂಕ: 28.02.2004 ರಂತೆ ಗ್ರಾಮ ಪಂಚಾಯಿತಿಯಲ್ಲಿ ವಾರಸುದಾರರಿಂದ ಅನುಮತಿ ಪಡೆದು ಬೇಡಿಕೆ ವಹಿಯಲ್ಲಿ ತೆರಿಗೆ ವಸೂಲಾತಿಗಾಗಿ ನಮೂದಿಸಲು ಅವಕಾಶವಿರುತ್ತದೆ. ಇದರಂತೆ ನಾನು ಕ್ರಮ ವಹಿಸಿರುತ್ತೇನೆ. ಸದರಿ ಸ್ವತ್ತಿನಲ್ಲಿ ನಾನು ಬೇಡಿಕೆ ವಹಿಯಲ್ಲಿ ದಾಖಲಿಸಿರುವ ದಾಖಲೆಯು ಯಾವುದೇ ವಿಧವಾದ ಹಕ್ಕು ನಿರೂಪಣೆಗೆ ಸೂಕ್ತ ದಾಖಲೆ ಅಲ್ಲವೆಂದು ಮತ್ತು ತೆರಿಗೆ ಪಾವತಿಸಲು ಮಾತ್ರ ಉಪಯೋಗಿಸತಕ್ಕದ್ದು ಎಂದು ಸುತ್ತೋಲೆಯಲ್ಲಿ ನಮೂದಿಸಿರುವಂತೆ ನಾನು ಕರ್ತವ್ಯ ನಿರ್ವಹಿಸಿರುತ್ತೇನೆ.
- ನಾನು ನನ್ನ ಸಾಕ್ಷಿ ಹೇಳಿಕೆಯಲ್ಲಿ ಮೇಲ್ಕಂಡ ಸುತ್ತೋಲೆ ದಿನಾಂಕ: 28.02.2004 ಮತ್ತು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸುತ್ತೋಲೆಯ ದಿನಾಂಕ: 09.12.2016ರ ನಿರ್ದೇಶನದಂತೆ ವಸತಿ ಯೋಜನೆಯಲ್ಲಿ ಆಯ್ಕೆಯಾದ ಫಲಾನುಭವಿಗೆ ನಿಯಮಾನುಸಾರ ಬೇಡಿಕೆ ನಮೂದಿಸಿರುವ ಸ್ವತ್ತಿನ ಸಂಖ್ಯೆ 115 ರ ಸ್ವತ್ತನ್ನು ನಿಗಮದ ಹೆಸರಿಗೆ ಅಡಮಾನ ಪತ್ರವನ್ನು ನಿಯಮಾನುಸಾರ ನೊಂದಿಸಿರುತ್ತೇನೆ. ಆದರೆ ವಿಚಾರಣಾಧಿಕಾರಿಗಳು ಈ ಬಗ್ಗೆ ನಿಯಮಾನುಸಾರ ಪರಿಶೀಲಿಸದೆ ಸಾಬೀತಾಗಿರುತ್ತದೆಂದು ತಮ್ಮ ವರದಿಯಲ್ಲಿ ನಮೂದಿಸಿ ಉಪಲೋಕಾಯುಕ್ತರಿಗೆ ಸಲ್ಲಿಸಿರುವುದು ನಿಯಮ ಬಾಹಿರವಾಗಿರುತ್ತದೆಂದು ಕಂಡು ಬಂದಿರುತ್ತದೆ. ಆದ್ದರಿಂದ ನನ್ನ ಮನವಿಯನ್ನು ಪರಿಶೀಲಿಸಿ ನನಗೆ ದಂಡ ವಿಧಿಸಲು ಶಿಫಾರಸ್ಸು ಮಾಡಿರುವ ಆದೇಶವನ್ನು ರದ್ದುಪಡಿಸಬೇಕಾಗಿ ವಿನಂತಿಸಿರುತ್ತಾರೆ.

ವಿಚಾರಣಾಧಿಕಾರಿಯವರು ತಮ್ಮ ವರದಿಯ ಕಂಡಿಕೆ 15 ರಿಂದ 19 ರಲ್ಲಿ ಆಪಾದಿತರ ವಿರುದ್ಧದ ಆರೋಪವು ಸಾಬೀತಾಗಿದೆ ಎಂದು ನಿರ್ಣಯಿಸಲು ಈ ಕೆಳಕಂಡ ಕಾರಣಗಳನ್ನು ನೀಡಿರುತ್ತಾರೆ.

DGO has examined himself and deposed about these facts. The evidence of the complainant, the doucuments and evidence of the DGO shows that at the time of selection of Manjammaa as beneficiary and azt the time of change of name in the khatha or the Registers, this DGO was not working in the said Grama Panchayath. He has taken charge only in the year 2010. None of the documents pertaining to Manjamma bears the signature of this DGO. Hence, first part of the charge is not established against the DGO.

Regarding the second part of the charge pertaining to Chandramma, DGO has contended that khatha number 115 was in the name of Chandramma's ancestors in the khatha Registers. He has stated that earlier it was in the name of one Nagappan and later it was in the name of Narasappa and then in the name of Lakshmidevamma who is the wife of Narasappa and that Chandramma is the daughter in law of Narasappa. He has stated that the change of khatha was done within the family and it was not registered. As per the then existing rules. He has further stated that objections were called from the public but nobody filed objections and therefore he permitted Chandramma to construct the House. He has also stated that the change of khatha was done legally.

Complainant has produced the copy of the un-registeredd Gift Dee dated 21st of June 2011 which is marked as Ex.P-4 and the building license copy issued on 2nd September 2011 which is marked as Ex.P-4(A). He has also produced the Demand Register extract of the year 2011-12 which shows that the name of Narasappa has been rounded off and the name of Chandramma has been entered in respect of khatha number 115. The DGO has produced old Tax Register extracts in from number 12 which are marked as Ex.D-6, Ex.D-15 and Ex.D-16. He has also produced the Tax Register extract after the entry of the name of Chandramma. It is marked as Exhibit 11. He has also produced the list of beneficiary wherein Chandramma was selected on 15 March 2011. It is marked as Ex.D-7. He is also produced the requisition statement that is (Ahavalu Takhte) which is marked as ExD-8 and a copy of the Genealogy which is marked as Ex.D-9.

Evidence of the complainant and the documents clearly shows that the name of Chandramma has been entered in the khata Register on the basis of the unregistered gift deed for the purpose of getting benefits from the housing scheme for Chandramma. It may be true that earlier it was in the name of the ancestors of Chandramma and that

Chandramma is the daughter in law of Narasappa and Lakshmidevamma. However he could not have changed the khatha or the entry in the Registers only on the basis of the unregistered Gift Deed. The interpretation of the DGO that the circular of the housing Corporation does not require that the land should be in the name of the beneficiary may be true, but it does not mean that he can change the

khatha or the name in the Tax Register extract on the basis of the unregistered gift deed. Further DGO contends that the Panchayath is not expected to maintain khatha and there is not such procedure in the Panchayath to maintain khatha and he relies on the circular Ex.D-13 and D-14. But, Ex.D-13 and 14 states about the Tax Register extract to be maintained by the Grama Panchayath as per the rules of Karnataka Panchayath Raj cum Panchayath Taxes and Fees Rules of 1994 and the Karnataka Panchayath Raj Accounts in Budget Rules of 1955. It does not say that the Tax Register extract could be changed on the basis of un-registered Gift deeds. When the law requires that a particular document has to be registered and wherein the deed is not registered, the DGO could not have relied on it. Though the DGO contends that there is no procedure for maintaining khatha in the Panchayath, he himself has admitted in the Written statement about the change of khatha and maintaining of khatha in the Panchayath therefore the contention of the DGO cannot be accepted.

For the aforesaid reasons I am of the opinion that the disciplinary authority has been able to prove the second part of the charge against the DGO. The charge of creating illegal khata no.78/1, in the name of Smt. Manjamma, by the DGO is not proved. The charge of changing khata no.115 in the name of Smt. Chandramma on the basis of an un-registered Gift Deed is 'Proved'. Hence, the aforesaid point is answered partly in the 'Affirmative'.

ಸರ್ಕಾರವು ಆಪಾದಿತರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಲಿಖಿತ ಹೇಳಿಕೆ ಮತ್ತು ವಿಚಾರಣಾ ನಡವಳಿ, ದಾಖಲೆಗಳು ಮತ್ತು ಸಾಕ್ಷ್ಯಾಧಾರಗಳನ್ನು ವಿವರವಾಗಿ ಪರಿಶೀಲಿಸಿದೆ. ಶ್ರೀ ಬಿ.ಕೆ. ಉತ್ತಮ್, ಇವರು ತಮ್ಮ ಹೇಳಿಕೆಯಲ್ಲಿ ಪ್ರಮುಖವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸರ್ಕಾರಿ ಸುತ್ತೋಲೆ ದಿನಾಂಕ: 28.02.2004 ರಂತೆ ಗ್ರಾಮ ಪಂಚಾಯಿತಿಯಲ್ಲಿ ವಾರಸುದಾರರಿಂದ ಅನುಮತಿ ಪಡೆದು ಬೇಡಿಕೆ ವಹಿಯಲ್ಲಿ ತೆರಿಗೆ ವಸೂಲಾತಿಗಾಗಿ ನಮೂದಿಸಲು ಅವಕಾಶವಿರುತ್ತದೆ. ಇದರಂತೆ ನಾನು ಕ್ರಮ ವಹಿಸಿರುತ್ತೇನೆ. ಸದರಿ ಸ್ವತ್ತಿನಲ್ಲಿ ನಾನು ಬೇಡಿಕೆ ವಹಿಯಲ್ಲಿ ದಾಖಲಿಸಿರುವ ದಾಖಲೆಯು ಯಾವುದೇ ವಿಧವಾದ ಹಕ್ಕು ನಿರೂಪಣೆಗೆ ಸೂಕ್ತ ದಾಖಲೆ ಅಲ್ಲವೆಂದು ಮತ್ತು ತೆರಿಗೆ ಪಾವತಿಸಲು ಮಾತ್ರ ಉಪಯೋಗಿಸತಕ್ಕದ್ದು ಎಂದು ಸುತ್ತೋಲೆಯಲ್ಲಿ ನಮೂದಿಸಿರುವಂತೆ ಕರ್ತವ್ಯ ನಿರ್ವಹಿಸಿರುವುದಾಗಿ ತಿಳಿಸಿರುತ್ತಾರೆ ಆದರೆ ಕಾನೂನಿನ ಪ್ರಕಾರ ಯಾವುದೇ ವ್ಯಕ್ತಿ ನಿವೇಶನ ಹೊಂದಲು ಆ ವ್ಯಕ್ತಿಗೆ ಸರ್ಕಾರವು ನಿಯಮಬದ್ಧವಾಗಿ ನಿವೇಶನ ನೀಡಿರಬೇಕು ಅಥವಾ ಯಾವುದೇ ಕಾನೂನು ಬದ್ಧ ಮೂಲದಿಂದ ನಿವೇಶನ ಬಂದಿರಬೇಕು. ಈ ಪ್ರಕರಣದಲ್ಲಿ ಶ್ರೀಮತಿ ಚಂದ್ರಮ್ಮ ನವರಿಗೆ ದಾನಪತ್ರದ ಮೂಲಕ ನಿವೇಶನ ಬಂದಿದೆ ಎಂದು ಒಂದು ನೊಂದಾಯಿಸಲ್ಪಡದ ದಾನ ಪತ್ರದ ಆಧಾರದ ಮೇಲೆ ತೆರಿಗೆ ರಿಜಿಸ್ಟರ್‌ನಲ್ಲಿ ಹೆಸರು ಬದಲಾಯಿಸಲು ಅವಕಾಶವಿರುವುದಿಲ್ಲ. ಆಪಾದಿತರು ಸರ್ಕಾರಿ ನೌಕರರಾಗಿದ್ದು ಸರ್ಕಾರಿ ಕೆಲಸದಲ್ಲಿ ನಿಷ್ಠೆ ತೋರದೆ ಕರ್ತವ್ಯಲೋಪ ಎಸಗಿರುವುದು ತೀವ್ರತರವಾದ ದುರ್ನಡತೆಯಾಗಿರುತ್ತದೆ. ಆದುದರಿಂದ ಆಪಾದಿತರ ಲಿಖಿತ ಹೇಳಿಕೆಯನ್ನು ಸರ್ಕಾರವು ತಿರಸ್ಕರಿಸಿದೆ.

ಸದರಿ ಪ್ರಕಣದಲ್ಲಿ ವಿಚಾರಣಾಧಿಕಾರಿಯವರು ವಿವರವಾದ ಸಮರ್ಥನೆಯೊಂದಿಗೆ ಆರೋಪವನ್ನು ಸಾಬೀತುಪಡಿಸಿರುತ್ತಾರೆ. ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ. ಬಿ.ಕೆ. ಉತ್ತಮ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ಮತ್ತು 8(iii-ಎ) ರಡಿ ನಿರ್ದಿಷ್ಟಪಡಿಸಿದಂತೆ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಹಾಗೂ ಅವರನ್ನು ಮುಂಬಡ್ತಿಗೆ ಪರಿಗಣಿಸಿದ ದಿನಾಂಕದಿಂದ ಅವರ ಮುಂಬಡ್ತಿಯನ್ನು ನಾಲ್ಕು ವರ್ಷಗಳ ವರೆಗೆ ಮುಂದೂಡುವ"** ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸರ್ಕಾರವು ವಿಚಾರಣಾ ವರದಿಯನ್ನು ಅಂಗೀಕರಿಸಿದೆ. ಮತ್ತು ಶ್ರೀ. ಬಿ.ಕೆ. ಉತ್ತಮ್, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ರವರ ವಿರುದ್ಧ ಸಾಬೀತಾಗಿರುವ ಆರೋಪಕ್ಕೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಅವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ಮತ್ತು 8(iii-ಎ) ರಡಿ ನಿರ್ದಿಷ್ಟಪಡಿಸಿದಂತೆ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಹಾಗೂ ಅವರನ್ನು ಮುಂಬಡ್ತಿಗೆ ಪರಿಗಣಿಸಿದ ದಿನಾಂಕದಿಂದ ಅವರ ಮುಂಬಡ್ತಿಯನ್ನು ನಾಲ್ಕು ವರ್ಷಗಳ ವರೆಗೆ ಮುಂದೂಡುವ"** ದಂಡನೆ ವಿಧಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 435 ಗ್ರಾಪಂಕಾ 2016 ಬೆಂಗಳೂರು, ದಿನಾಂಕ:20-09-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು, ಶ್ರೀ ಬಿ.ಕೆ. ಉತ್ತಮ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪುರವರ ಗ್ರಾಮ ಪಂಚಾಯಿತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮ 1957 ರ ನಿಯಮ 8(iii) ಮತ್ತು 8(iii-ಎ) ರಡಿ ನಿರ್ದಿಷ್ಟಪಡಿಸಿದಂತೆ ಅವರ ಮುಂದಿನ **"ನಾಲ್ಕು ವಾರ್ಷಿಕ ವೇತನ ಬಡ್ತಿಗಳನ್ನು ಸಂಚಿತ ಪರಿಣಾಮದೊಂದಿಗೆ ತಡೆಹಿಡಿಯುವ ಹಾಗೂ ಅವರನ್ನು ಮುಂಬಡ್ತಿಗೆ ಪರಿಗಣಿಸಿದ ದಿನಾಂಕದಿಂದ ಅವರ ಮುಂಬಡ್ತಿಯನ್ನು ನಾಲ್ಕು ವರ್ಷಗಳ ವರೆಗೆ ಮುಂದೂಡುವ"** ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

Narayana DG.
(ಡಿ.ಜಿ. ನಾರಾಯಣ) 20/9/19
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.

5. ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯತಿ ಮಧುಗಿರಿ, ತುಮಕೂರು ಜಿಲ್ಲೆ.

6. ಶ್ರೀ ಬಿ.ಕೆ. ಉತ್ತಮ್, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪುರವರ ಗ್ರಾಮ ಪಂಚಾಯಿತಿ, ಮಧುಗಿರಿ ತಾಲ್ಲೂಕು, ತುಮಕೂರು ಜಿಲ್ಲೆ.

7. ಗಣಕ ಕೋಶ.

8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.